International Journal of Kannada Research 2020; 6(1): 88-92

International Journal of Kannada Research
www.kannadajournal.com

**ISSN: 2454–5813**
IJKR 2020; 6(1): 88-92
© 2020 IJKR
www.kannadajournal.com
Received: 16-11-2019
Accepted: 18-12-2019

**ಲೇ. ಶ್ರೀ. ಸತೀಶ್. ಎ.ಪಿ**
ಸಂಶೋಧನಾ ವಿದ್ಯಾರ್ಥಿ, ಜೈನ್ ವಿಶ್ವವಿದ್ಯಾಲಯ, ಬೆಂಗಳೂರು.

**ಡಾ. ಮಂಜುನಾಥ**
ಸಂಶೋಧನಾ ವಿದ್ಯಾರ್ಥಿ, ಜೈನ್ ವಿಶ್ವವಿದ್ಯಾಲಯ, ಬೆಂಗಳೂರು.

**Corresponding Author:**
**ಲೇ. ಶ್ರೀ. ಸತೀಶ್. ಎ.ಪಿ**
ಸಂಶೋಧನಾ ವಿದ್ಯಾರ್ಥಿ, ಜೈನ್ ವಿಶ್ವವಿದ್ಯಾಲಯ, ಬೆಂಗಳೂರು.

# ಮನುಕುಲದ ಕೊನೆಯ ಕೊಂಡಿ – ಅಂಡಮಾನಿನ ಆದಿವಾಸಿಗಳು

**ಲೇ. ಶ್ರೀ. ಸತೀಶ್. ಎ.ಪಿ, ಡಾ. ಮಂಜುನಾಥ**

ಅಂಡಮಾನೀಯರು ಇಡೀ ಜಗತ್ತಿನಲ್ಲಿಯೇ ನಶಿಸಿ ಹೋಗುತ್ತಿರುವ ಭಯಕ್ಕೆ ತುತ್ತಾಗಿರುವ ಬುಡಕಟ್ಟು. ದ್ವೀಪ ಸಮೂಹದಲ್ಲಿರುವ ಮೂಲನಿವಾಸಿಗಳನ್ನು ಎರಡು ಮುಖ್ಯ ಭಾಗಗಳನ್ನಾಗಿ ಗುರುತಿಸಬಹುದಾಗಿದೆ: ನಿಗ್ರಿಟೋಗಳನ್ನು ಅಂಡಮಾನೀಯರೆಂದು ವರ್ಗೀಕರಿಸಲಾಗಿದೆ. ಇವರಲ್ಲಿ ಅಂಡಮಾನೀಯರು, ಓಂಗೇಗಳು, ಜಾರವಾಗಳು ಮತ್ತು ಸೆಂಟಿನೇಲಿಯನ್‌ಗಳು ಎಂದು ವಿಂಗಡನೆಗಳಿವೆ. ಇತರ ಹತ್ತು ಒಳ ಪಂಗಡಗಳು ಈಗಾಗಲೇ ನಿರ್ನಾಮವಾಗಿ ಬಿಟ್ಟಿವೆ. ಅವುಗಳೆಂದರೆ: ಅಕಕಾರಿ, ಅಕಕೋರ, ಅಕಬೋ, ಅಕಬಿರು, ಅಕಕೇಡೆ, ಅಕಕೋಲ್, ಓಕೊ ಜುವೈ, ಅಕಪುಸಿಕವರ್, ಅಕಬಲೆ ಮತ್ತು ಅಕಬಿಯಾ.

ಸೆಂಟಿನೇಲಿಯನ್‌ರು ಮತ್ತು ಕೆಲಮಟ್ಟಿಗೆ ಜರವಾಗಳು ತಮ್ಮ ಜೀವವನ್ನು ಪಣಕ್ಕಿಟ್ಟು ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುತ್ತಿದ್ದಾರೆ. ನಾಗರೀಕರ ಕೀಳು ಪ್ರಲೋಭನೆಗಳಿಗೆ ಒಳಗಾಗುತ್ತಿಲ್ಲ. ಯಾರನ್ನು ಹತ್ತಿರ ಬರಲು ಬಿಡುವುದಿಲ್ಲ. ಬಹುಶಃ ಇಂದು ಇಡೀ ಜಗತ್ತಿನಲ್ಲಿ ಹಳೆಯ ಶಿಲಾಯುಗದ (ಸುಮರು 5,00,000 ವರ್ಷಗಳಿಂದ 1,00,000 ವರ್ಷಗಳ ಹಿಂದಿನ) ಜೀವನ ನಡೆಸುತ್ತಿರುವ ಏಕೈಕ ಬುಡಕಟ್ಟೆಂದರೆ ಸೆಂಟಿನೇಲಿಯನ್‌ರು. ಗ್ರೇಟ್ ಅಂಡಮಾನೀಯರು ಮತ್ತು ಓಂಗೇಗಳು ಈಗಾಗಲೇ ವಲಸಿಗರೊಂದಿಗೆ ಸಂಪರ್ಕ ಬೆಳಸಿ ತಮ್ಮ ಕುಲಗಳನ್ನು ಕ್ಷೀಣಗೊಳಿಸಿ ಕೊಂಡಿದ್ದನ್ನು ಅರಿತೋ ಏನೋ, ತಮ್ಮ ಬಾಣ ಬರ್ಜಿಗಳಿಂದ ಹೊರಗಿನವರನ್ನು ಕಡಲತಡಿಯಿಂದ ದೂರವೇ ಇಟ್ಟಿದ್ದಾರೆ.

ನಿಕೋಬಾರಿಗಳು ಮಂಗೋಲಾಯ್ಡ್ ಜನಾಂಗದವರು. ಅವರಲ್ಲಿ ಅತಿ ಹಿಂದುಳಿದ ಬುಡಕಟ್ಟೆಂದರೆ ಶೋಂಪೆನ್ನರು. ಇನ್ನೊಂದು ಪಂಗಡ ವಲ್ಲೂಜ್‌ಗಳು. (ಇವರ ಬಗ್ಗೆ ಯಾವುದೇ ಮಾಹಿತಿಯೂ ದೊರಕಿರುವುದಿಲ್ಲ) ಅಂಡಮಾನೀಯರ ಮೈಬಣ್ಣ ಕಂಚುವರ್ಣದಿಂದ ಹೊಗೆಗಪ್ಪಿನವರೆಗೆ, ಮೋಟು ತಲೆಗೂದಲು ದಟ್ಟ ಗುಂಗುರು, ಸುತ್ತಿಕೊಂಡು ಕೆಂಚು ಛಾಯೆಯಿರುವುದು. ಮೈರೋಮಗಳು ಅತಿವಿರಳ. ಮೋಟು ತಲೆ, ಚಿಕ್ಕ ಬಾಗಿದ ಮೂಗು ಬುಡದಲ್ಲಿ ಒತ್ತಿದಂತಿರುತ್ತದೆ. ತುಂಬಿಕೊಂಡ ದಪ್ಪ ತುಟಿಗಳು ಅಗಲವಾದ ಮುಖದಲ್ಲಿ ಎದ್ದು ಕಾಣುವ ಕಪೋಲ ಅಸ್ತಿಗಳು. ಚಿಕ್ಕ ಗಡ್ಡ, ಗಿಡ್ಡ ಆಕೃತಿ. ನೀಗ್ರೋಯ್ಡ್ ತಳಿಯ ನೀಗ್ರಿಟೋ ಜನಾಂಗದ ಲಕ್ಷಣಗಳಿವು. ಇಂತವೇ ಲಕ್ಷಣಗಳುಳ್ಳ ಮಲೆಯಾದ ಸೆಮೆಂಗರು, ಫಿಲಿಫೈನ್ಸ್‌ನ ಆಯೆಟರು ಮತ್ತು ನ್ಯೂಗಿನಿಯ ಟಾಪಿರೋನಗಳು. ಅಂಡಮಾನೀಯರು ಇಲ್ಲಿ ಹೇಗೆ, ಯಾವಾಗ ಬಂದರು? ಎಂಬುದಕ್ಕೆ ನಿಕರವಾದ ಉತ್ತರಗಳು ಸಿಗುವುದಿಲ್ಲ.

ಅಂಡಮಾನ್ ಎಂಬುದು ಅಂಗಮೇನಿಯನ್ (ಅಂದರೆ ಜೋಡಿ) ಎಂಬ ಅರೇಬಿಕ್ ಪದದಿಂದ ಬಂದಿದೆ. ಹಿರಿಯ ಹಾಗೂ ಕಿರಿಯ ದ್ವೀಪ ಸಮೂಹಗಳು ಇರುವುದರಿಂದ ಈ ಹೆಸರು ಬಂದಿರಬಹುದು. ಕಳೆದ ಶತಮಾನದಲ್ಲಿ ನಾಯಿಗಳನ್ನು ನೋಡುವವರೆಗೂ ಯಾವ ಪ್ರಾಣಿಯನ್ನು ಸಾಕುತ್ತಿರಲಿಲ್ಲ. ಕಾಡಿನ ಮತ್ತು ಸಾಗರ ಉತ್ಪನ್ನಗಳನ್ನು ತಿಂದು ಬದುಕುವ ಇವರಿಗೆ ಬೇಸಾಯವಾಗಲಿ, ಪಶು ಸಂಗೋಪನೆಯಾಗಲಿ ಇಂದಿಗೂ ತಿಳಿದಿಲ್ಲ. ಆಗೀಗ ಕಾಡು ಹಂದಿಯನ್ನು ಸಾಕುತ್ತಾರಾದರೂ ಮರಿಯಾಗುವವರೆಗೆ ಬಿಡುವುದಿಲ್ಲ. ಆ ಹಂದಿಗಳನ್ನು ಕೊಚ್ಚಿ ತಿನ್ನುತ್ತಾರೆ. ಇವರುಗಳು ಆಹಾರಕ್ಕಾಗಿ ಮೂರು ಬಗೆಯ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ವನ್ಯ ಮೃಗಗಳ ಬೇಟೆ, ಸಾಗರಾಳದ ಮೀನು ಆಮೆಗಳ ಬೇಟೆ, ಮತ್ತು ಕಾಡುಗಳ ಹಣ್ಣು, ಗೆಡ್ಡೆಗೆಣಸುಗಳನ್ನು ಆಹಾರವಾಗಿ ಬಳಸುತ್ತಾರೆ. ಇಲ್ಲಿ ಕೆಲವು ವಿಸ್ಮಯಗಳಿದ್ದು ಹೇರಳವಾಗಿ ದೊರೆಯುವ ಜಿಂಕೆಗಳನ್ನು ಇವರು ಕೊಲ್ಲುವುದಿಲ್ಲ. ಇಂದಿಗೂ ಜಿಂಕೆಗಳು ನಾಗರಿಕರ ಬೇಟೆಯಿಂದ ಬಚಾವಾಗಲೂ ಜಾರವಾಗಳ ನೆಲೆಗಳಿಗೆ ಹೋಗುತ್ತವೆ. ಗಾಳ ಬಲೆಗಳ ಬಳಕೆ ಇಲ್ಲವಾದರೂ ಕಡಸಿನ ಗಿಡವೊಂದನ್ನು ಜಜ್ಜಿ ವಿಷಪೂರಿತ ರಸವೊಂದನ್ನು ನೀರಿಗೆ ಹಾಕಿ

ಮೀನುಗಳನ್ನು ಕೊಂದು ಹಿಡಿಯುವುದುಂಟು. ಮೃದ್ವಂಗಿಗಳನ್ನು ಜೇನನ್ನು ಸಂಗ್ರಹಿಸಲು ಕೈಬಾಚಿಗಳನ್ನು ಬಳಸುತ್ತಾರೆ. ಇವರದು ಸಂಗ್ರಹ ಅರ್ಥವ್ಯವಸ್ಥೆ. ಉತ್ಪಾದಕ ಅರ್ಥವ್ಯವಸ್ಥೆಯಲ್ಲ. ಬದುಕಲು ನೀರಿನ ಆಸರೆಯನ್ನು ಹುಡುಕುತ್ತಾರೆ. ದಟ್ಟ ಮರಗಳ ನಡುವೆ ಬಯಲನ್ನು ತಾಣವಾಗಿ ಆರಿಸಿಕೊಳ್ಳುತ್ತಾರೆ. ಅವರಲ್ಲಿ ಸ್ಥಳೀಯ ಗುಂಪುಗಳಿವೆ. ಪ್ರತಿ ಗುಂಪಿಗೂ ಪ್ರತ್ಯೇಕವಾದ ಶಿಬಿರ ಸ್ಥಾನಗಳಿರುತ್ತವೆ. ಕೆಲವರು ತಿಂಗಳುಗಳ ನಂತರ ತಮ್ಮ ಬೀಡುಗಳನ್ನು ಬದಲಿಸುತ್ತಾರೆ. ಪ್ರತಿಯೊಂದು ಶಿಬಿರದಲ್ಲಿಯೂ ಒಂದು ದೊಡ್ಡ ಸಾಮೂಹಿಕ ಗುಡಿಸಲನ್ನು ಜೇನುಗೂಡಿನ ಆಕಾರದಲ್ಲಿ ವಿಶಿಷ್ಟವಾಗಿ ನಿರ್ಮಿಸುತ್ತಾರೆ. ತಾಳೆ ಎಲೆಯ ತಡಿಕೆಗಳನ್ನು ಹೊದಿಸಿ ಮಾಡು ನಿರ್ಮಾಣ ಮಾಡುತ್ತಾರೆ. ಮಾಡಿನ ಅಂಚುಗಳು ಸುತ್ತಲೂ ನೆಲವನ್ನು ಸೋಕುವಂತಿರುತ್ತವೆ. ಒಂದೆಡೆ ಸಣ್ಣ ಬಾಗಿಲಿದ್ದು, ನಡುವಣ ಪ್ರದೇಶ ಕುಣಿತಕ್ಕೆ ಮೀಸಲಾಗಿರುತ್ತದೆ. ಸುತ್ತಲೂ ಬೇರೆಬೇರೆ ಕುಟುಂಬಗಳ ವಸತಿ, ಹಲವಾರು ಗುಡಿಸಲುಗಳನ್ನು ನಿರ್ಮಿಸುವುದಾದರೆ ಒಂದಕ್ಕೊಂದು ತಾಗುವಂತೆಯೂ ನಿರ್ಮಿಸುತ್ತಾರೆ. ನಾಲ್ಕು ಕಂಬಗಳನ್ನು ನೆಟ್ಟು ಇಳಿಜಾರಾಗಿ ತಾಳೆಗರಿ ಹೊದಿಸಿ ನಿರ್ಮಿಸಿದ ಗುಡಿಸಲುಗಳು. ಇವೇ ಅವರ ಬದುಕಿನ ನೆಲೆಗಳೆಂದು ದೇ.ನಾ.ಶ್ರೀನಿವಾಸಮೂರ್ತಿಯವರು ತಮ್ಮ ಕಾಲಾತೀತತರ ದ್ವೀಪಗಳಲ್ಲಿ ಎಂಬ ಕೃತಿಯಲ್ಲಿ ಚಿತ್ರಿಸಿದ್ದಾರೆ.

**ಆದಿವಾಸಿಗಳ ಜೀವನದೃಷ್ಟಿ ಮತ್ತು ಸಂಸ್ಕೃತಿ**

ಅಂಡಮಾನಿನ ಮೂಲನಿವಾಸಿಗಳು ಬೆತ್ತಲೆಯಿರುವವರು ಎಂಬ ಪ್ರತೀತಿಯಿದ್ದರೂ ಗಂಡಸರು ಉಡುದಾರ, ಲಿಂಗವಸ್ತ್ರಗಳನ್ನು ಧರಿಸುತ್ತಾರೆ. ಜರವಾಗಳು ಪೂರ್ಣ ಬೆತ್ತಲೆ. ಮೂಳೆ, ಕವಡೆ, ಮರ, ಬೊಂಬಿನ ಚೂರುಗಳ ಸರಗಳನ್ನು ಧರಿಸುತ್ತಾರೆ. ಹೆಂಗಸರು ಸಡಿಲವಾದ ಡಾಬು ಧರಿಸುತ್ತಾರೆ. ಓಂಗೆ ಹೆಂಗಸರ ಉಡುಪು ವಿಶಿಷ್ಟವಾದುದು. ನಾರಿನ ದುಂಡನೆಯ ಜೊಂಪೆ, ಜೊಂಡನ್ನು ಜನನೇಂದ್ರಿಯಕ್ಕೆ ಅಡ್ಡವಾಗಿ ಇರುವಂತೆ ಕಟ್ಟಿಕೊಳ್ಳುತ್ತಾರೆ. ಹುಡುಗಿಯರು ಏಳೆಂಟು ವರ್ಷ ತಲುಪಿದಾಗ ಈ ಜೊಂಪೆಯನ್ನು ಧರಿಸಲು ಆರಂಭಿಸುತ್ತಾರೆ. ಹೆಂಗಸರು ಹೆಂಗಸರೆದುರೂ ತಮ್ಮ ಉಡುಗೆಗಳನ್ನು ಬದಲಿಸುವುದಿಲ್ಲ.

ಗಂಡಸರು ಮಳೆ ಮತ್ತು ಬಿಸಿಲನ್ನು ತಡೆದುಕೊಳ್ಳಲು ತಲೆಗೆ ಮಟ್ಟಾಳೆ ಧರಿಸುತ್ತಾರೆ. ಎಲೆಯ ಛತ್ರಿಗಳನ್ನು ಮಾಡಿಕೊಳ್ಳುತ್ತಾರೆ. ಕೇಶ ಮುಂಡನ ಜನಿಸಿದ ಕೆಲವು ಗಂಟೆಗಳಿಗೆ ಆರಂಭವಾಗುತ್ತದೆ. ಹೆಂಗಸರೂ, ಗಂಡಸರು ತಮ್ಮ ತಲೆಕೂದಲನ್ನು ವಾರ ಅಥವಾ ಹತ್ತು ದಿನಗಳಿಗೊಮ್ಮೆ ಬೋಳಿಸಿಕೊಳ್ಳುತ್ತಾರೆ. ಜಾರವಾಗಳಲ್ಲಿ ತಲೆಬೋಳಿಸಿಕೊಳ್ಳುವುದು ಅಷ್ಟಾಗಿ ರೂಢಿಯಲಿಲ್ಲ. ಗಂಡಸರಿಗೆ ಗಡ್ಡ ಮೀಸೆಗಳು ವಿರಳವಾಗಿದ್ದು, ಗುಂಗುರು ಗುಂಗುರಾಗಿ ಇರುತ್ತವೆ. ಕೇಶ ಮುಂಡನ ಹೆಂಗಸರ ಸೇವೆ. ಅನಿವಾರ್ಯವಿದ್ದಾಗ ಮಾತ್ರ ಗಂಡಸು ಈ ಕಾರ್ಯಕ್ಕೆ ತೊಡಗುತ್ತಾನೆ. ಎಳೆಯ ಮಕ್ಕಳ ತಲೆ ಬೋಳಿಸುವ ಮುನ್ನ ಆ ತಾಯಿ ತನ್ನ ಎದೆಹಾಲಿನಿಂದ ಆ ಮಗುವಿನ ಕೂದಲನ್ನು ತೋಯಿಸಿ, ಕೇಶ ಮುಂಡನ ಮಾಡುತ್ತಾಳೆ. ಇತರರು ನೀರಿನ ಬಳಕೆ, ಬೆಣಸು ಕಲ್ಲು, ಗಾಜಿನ ಚೂರುಗಳಿಂದ ಕೇಶಮುಂಡನ ಮಾಡಿಕೊಳ್ಳುತ್ತಾರೆ.

ಮುಖವೂ ಸೇರಿದಂತೆ ಮೈಗೆಲ್ಲಾ ಬಣ್ಣ ಬಳಿದುಕೊಳ್ಳುತ್ತಾರೆ. ಅವಿವಾಹಿತ ಹೆಂಗಸರು ಕುತ್ತಿಗೆಗೆ ಬಣ್ಣ ಬಳಿದುಕೊಳ್ಳುವುದಿಲ್ಲ. ಬಣ್ಣದ ವೈವಿಧ್ಯವೂ ವ್ಯಕ್ತಿಯು ಕಾಯಿಲೆಯಿರುವ, ದುಃಖಿಸುತ್ತಿರುವ, ಸುಖಿಯಾಗಿರುವ ಭಾವಗಳನ್ನು ಸೂಚಿಸುತ್ತದೆ. ಅಂಡಮಾನೀಯರಿಗೆ ಮಡಿಕೆಗಳನ್ನು ಮಾಡುವುದು ಬರುತ್ತದೆ. ಮಾಡಿದ ಮಡಿಕೆಗಳನ್ನು ಸುಡುತ್ತಾರೆ. ಅನಂತರ ಬಣ್ಣಗಳಿಂದ ಗೆರೆಗಳನ್ನು, ಚುಕ್ಕಿಗಳನ್ನು ಮೂಡಿಸಿ ಚಿತ್ತಾರ ರಚಿಸುತ್ತಾರೆ. ಉತ್ತರ ಅಂಡಮಾನಿನಲ್ಲಿ ಹೆಂಗಸರೂ ಮಾತ್ರ ಮಡಿಕೆಗಳನ್ನು ತಯಾರು ಮಾಡುತ್ತಾರೆ. ದಕ್ಷಿಣದಲ್ಲಿ ಯಾವುದೇ ಮಿತಿಗಳಿಲ್ಲ. ಮಡಕೆಯ ಭದ್ರತೆಗೆ ಬೊಂಬು, ಬೆತ್ತಗಳನ್ನು ಸೀಳಿ ಒರಟು ಬುಟ್ಟಿಗಳನ್ನು ನಿರ್ಮಿಸುತ್ತಾರೆ. ಮರದ ಬಾನೆಗಳನ್ನು ನಿರ್ಮಿಸುತ್ತಾರೆ. ಕಬ್ಬಿಣದ ಕೆಲವು ಉಪಕರಣಗಳನ್ನು ಬಳಸುತ್ತಾರೆ. ಇವರ ಅತಿಕೌಶಲ್ಯದ ಕೆಲಸವೆಂದರೆ ಮರದ ದಿಮ್ಮಿಗಳಲ್ಲಿ ತೋಡು ದೋಣಿಗಳನ್ನು ನಿರ್ಮಿಸುವುದು.

ಪ್ರತಿ ಪಂಗಡಕ್ಕೂ ನಿರ್ದಿಷ್ಟವಾದ ಪ್ರದೇಶವು ನಿಗದಿಯಾಗಿರುತ್ತದೆ. ಪ್ರತಿ ಪಂಗಡದಲ್ಲಿ ಹಲವಾರು ಸ್ಥಳೀಯ ಗುಂಪುಗಳು. ಪ್ರತಿ ಸ್ಥಳೀಯ ಗುಂಪಿನಲ್ಲೂ ಹತ್ತಾರು ಕುಟುಂಬಗಳು. ಪ್ರತಿ ಗುಂಪಿಗೊಂದು ನಿಗದಿಯಾದ ಬೇಟೆಯ ಪ್ರದೇಶ. ಇತರ ಪ್ರದೇಶದಲ್ಲಿ ಬೇಟೆಯಾಡಲು ಅವರ ಅನುಮತಿಯನ್ನು ಪಡೆಯಬೇಕು. ಜನನದಿಂದ ವ್ಯಕ್ತಿಯ ಪಂಗಡ ನಿರ್ಣಯವಾಗುತ್ತದೆಯಾದರೂ ಸ್ವಯಿಚ್ಚೆಯಿಂದ ಪಂಗಡ ಬದಲಾಯಿಸಲು ಅವಕಾಶವಿದೆ. ಸೇರಿಸಿಕೊಳ್ಳುವ ಪಂಗಡದ ಅನುಮತಿ ಬೇಕಷ್ಟೇ. ಮದುವೆಯಾದ ನಂತರ ಇಬ್ಬರೂ ಅವನ ಅಥವಾ ಅವಳ ಪಂಗಡಕ್ಕೆ ಸೇರುತ್ತಾರೆ. ಸ್ಥಳೀಯ ಸಂಪನ್ಮೂಲಗಳು ಕ್ಷೀಣಿಸಿದರೆ ಇಲ್ಲವೆ ಬೇರಾವ ಸೂಕ್ತ ಕಾರಣ ಕಂಡರೆ ಪಂಗಡ ಬದಲಿಸುತ್ತಾರೆ. ಕುಟುಂಬದಲ್ಲಿ ತಂದೆ, ತಾಯಿ, ಸಣ್ಣ ಮಕ್ಕಳು, ಬೆಳೆದ ಮಕ್ಕಳು ಪ್ರತ್ಯೇಕ. ಸಾಮೂಹಿಕ ಜೀವನ ನಡೆಸುತ್ತಾರೆ. ಹೆಂಡತಿ ಗಂಡನೊಡನೆ ಬಾಳಲು ಬರುವುದು ರೂಢಿ. ಗಂಡಸು ಬೇಟೆಯಾಡುವ, ದೋಣಿಗಳನ್ನು ನಿರ್ಮಿಸುವ ಕಾಯಕವನ್ನು ಮಾಡಿದರೆ ಹೆಂಗಸರು ಸೌದೆ ಸಂಗ್ರಹಿಸುವ, ತರಕಾರಿ ಒದಗಿಸುವ, ಅಡುಗೆ ಮಾಡುವ ಕಾರ್ಯ ಮಾಡುತ್ತಾಳೆ. ಗಂಡು ಮತ್ತು ಹೆಣ್ಣು ಮಕ್ಕಳು ಇವರದೇ ರೀತಿಯಲ್ಲಿ ತರಬೇತಿಯನ್ನು ಪಡೆದು ಸಿದ್ಧರಾಗುತ್ತಾರೆ.

ಮಗು ಜನಿಸುವ ಮೊದಲೇ ನಾಮಕರಣ. ಗರ್ಭಿಣಿ ಹೆಂಗಸು ತನಗೆ ಹುಟ್ಟಲಿರುವ ಮಗು ಗಂಡೋ, ಹೆಣ್ಣೋ ಎಂಬುದನ್ನು ಊಹಿಸಬಲ್ಲಳು. ಮಗು ಎಡಕ್ಕೆ ಭಾಸವಾದರೆ ಗಂಡು, ಎಡಕ್ಕೆ ಭಾಸವಾದರೆ ಹೆಣ್ಣು; ಸಾಂಪ್ರದಾಯಿಕ ಇಪ್ಪತ್ತು ಹೆಸರುಗಳಲ್ಲಿ ಒಂದನ್ನು ಗರ್ಭದಲ್ಲಿರುವ ಶಿಶು ಪಡೆಯುತ್ತದೆ. ಈ ಗರ್ಭನಾಮದ ಜೊತೆಗೆ ಹುಟ್ಟಿದ ನಂತರ ಅದರ ಶರೀರ ವೈಶಿಷ್ಟ್ಯ, ನ್ಯೂನ್ಯತೆಗಳನ್ನು ಗಮನಿಸಿ ಇನ್ನೊಂದು ಹೆಸರನ್ನು ಸೇರಿಸಲಾಗುತ್ತದೆ. ಹೆಣ್ಣು ಮಗುವಾದರೆ ಋತುಮತಿಯಾದಾಗ ಆ ಋತುವಿನಲ್ಲಿ ಹೂ ಬಿಡುತ್ತಿರುವ ಮರದ ಅಥವಾ ಆ ಹೂವಿನ ಹೆಸರನ್ನೇ ಇಡಲಾಗುತ್ತದೆ. ಅಂದಿನಿಂದ ಅವಳ ಈ ಹಿಂದಿನ ಹೆಸರುಗಳೆಲ್ಲಾ ಮರೆಯಾಗುತ್ತವೆ. ಮಗು ಜನಿಸಿದ ತಿಂಗಳ ಆಚೀಚೆ ತಂದೆ ತಾಯಿಗಳನ್ನು ಇಂಥವನ ತಾಯಿ, ಇಂಥವನ ತಂದೆ ಎಂದು ಸಂಬೋಧಿಸಲಾಗುತ್ತದೆ.

ಸಂತಾನಕ್ಕೆ ಹಂಬಲಿಸುವ ಹೆಂಗಸು ಗೊದ್ದದ ಮೊಟ್ಟೆಗಳನ್ನು ನುಂಗುತ್ತಾಳೆ. ಅಂಜೂರದ ಮರವೆಂದರೆ ಈ ಜನಗಳಿಗೆ ವಿಶೇಷ ಗೌರವ. ಜನಿಸಲಿರುವ ಮಕ್ಕಳ ಆತ್ಮಗಳು ಆ ಮರಗಳಲ್ಲಿ ವಾಸಿಸುತ್ತವೆ ಎಂದು ನಂಬುತ್ತಾರೆ. ಬಹುಶಃ ಬೆಂಗಳೂರಿನ ಸುತ್ತಮುತ್ತ ಮದುವೆ ಕಾರ್ಯಗಳಲ್ಲಿ ಅತ್ತಿಯ ಮರದ ಕೊಂಬೆಯನ್ನು ಮತ್ತು ಹಣ್ಣುಕಳ್ಳಿಯ ರೆಂಬೆಗಳನ್ನು ವಿವಾಹ ಮಂಟಪದ ಕಂಬಗಳಿಗೆ ಕಟ್ಟಿ ಪೂಜಿಸುವ ಸಂಪ್ರದಾಯವಿದೆ. ಇದು ಬಹುಫಲದ ಪ್ರತೀಕ. ಹಾಗಾಗಿ ಇವರೂ ಸಹ ಈ ಮರವನ್ನು ಕಡಿಯುವುದಿಲ್ಲ.

ಹುಡುಗಿ ಋತುಮತಿಯಾದಾಗ ಅಪ್ಪ ಅಮ್ಮ ಜೋರು ಧ್ವನಿ ತೆಗೆದು ಅಳುತ್ತಾರೆ. ಮೂರು ದಿನ ಹುಡುಗಿಗೆ ಪ್ರತ್ಯೇಕ ಗುಡಿಸಲಿಲ್ಲಿ ಏಕಾಂತವಾಸ. ಮೊದಲ ಮೂರು ದಿನ ಮಾತನಾಡುವಂತಿಲ್ಲ. ಕೈಯಿಂದ ಊಟಮಾಡುವಂತಿಲ್ಲ. ನಿದ್ರಿಸುವಂತಿಲ್ಲ. ಒಂದು ತಿಂಗಳ

ಕಾಲ ನಿತ್ಯವೂ ಬೆಳಗಿನ ಸ್ನಾನ. ಜನನದ ನಂತರ ಸ್ನಾನವಾದ ನಂತರ ಇದೇ ಇನ್ನೊಂದು ಸ್ನಾನ ಶ್ರೇಣಿ. ಕೆಲವೊಂದು ಆಹಾರ ತಿನ್ನುವಂತಿಲ್ಲ.

ಹುಡುಗ ವಯಸ್ಸಿಗೆ ಬಂದರೆ ಒಂದು ಸಮಾರಂಭ. ಹಿರಿಯನೊಬ್ಬ ಅವನ ಬೆನ್ನ ಮೆಲೆ ಹಲವಾರು ಗೀರುಗಾಯಗಳನ್ನು ಮಾಡುತ್ತಾನೆ. ಆಗ ಅವನಿಗೆ ಕೆಲವೊಂದು ಆಹಾರ ವರ್ಜ್ಯ. ಆಮೆಯ ಮಾಂಸದ ರಸದೌತಣ ನಡೆಸುತ್ತಾರೆ. ಹುಡುಗನಿಗೆ ಅಲ್ಲಿಂದ ಹೊಸ ಹೆಸರು ನೀಡಲಾಗುತ್ತದೆ. ಸ್ವಗೋತ್ರ ವಿವಾಹವಿಲ್ಲದಿದ್ದರೂ ಈ ನಿಯಮ ಅತ್ಯಂತ ಕಟ್ಟು ನಿಟ್ಟಾಗಿ ಆಚರಣೆಯಲ್ಲಿಲ್ಲ. ಏಕಪತ್ನಿ, ಏಕಪತಿ ಪದ್ಧತಿ ರೂಢಿಯಲ್ಲಿದೆ. ಮದುವೆಗೆ ಮುಂಚೆ ಸ್ವಚ್ಛಂದವಾದ ಲೈಂಗಿಕತೆಗೆ ಯಾವುದೇ ಅಡ್ಡಿಯಿಲ್ಲ. ಆದರೆ ವಿವಾಹದ ನಂತರದ ಜಾರ, ಜಾರಣೆಯರಿಗೆ ಕೊಲೆಯೇ ಉತ್ತರ. ವಿಚ್ಚೇದನಗಳು ಅಪರೂಪ. ಸಮೀಪದ ರಕ್ತಸಂಬಂಧಿಯನ್ನು ಮದುವೆಯಾಗುವಂತಿಲ್ಲ. ಗಂಡಸು ತನ್ನ ತಂಗಿ, ಅರೆ ತಂಗಿ, ತಂದೆಯ ತಂಗಿ, ತಾಯಿಯ ತಂಗಿ, ಅಣ್ಣನ ಮಗಳು, ಅಕ್ಕನ ಮಗಳು – ಇವರನ್ನು ಮದುವೆಯಾಗುವಂತಿಲ್ಲ. ಆದರೆ ಕಿರಿಯ ವಯಸ್ಸಿನ ಗಂಡನ್ನು ಮದುವೆಯಾಗುವುದೂ ಇಲ್ಲ. ವಿಧುರನು ತನ್ನ ನಾದಿನಿಯನ್ನು ಮದುವೆಯಾಗುತ್ತಾನೆ. ದತ್ತು ಮಗ ಸಾಕು ತಂದೆಯ ಮಗಳನ್ನು ಮದುವೆಯಾಗಬಹುದು. ಇನ್ನು ಮದುವೆಯ ಸಂದರ್ಭ ವಿಶಿಷ್ಟ. ಒಂದು ಸಂಜೆ ನಿಗಧಿಯಾಗಿರುತ್ತದೆ. ಮೊದಲೇ ಒಲಿದಿರುವ ಗಂಡನ್ನು ಹೆಣ್ಣಿನ ಮನೆಯ ವೈಚಿತ್ಯ ನೋಡಿ ಹೆಣ್ಣನ್ನು ಹೊಸ ಗುಡಿಸಲಿನಲ್ಲಿ ಚಾಪೆಯ ಮೆಲೆ ಕೂರಿಸುತ್ತಾರೆ. ಸುತ್ತ ಅವಳ ಗೆಳತಿಯರು. ಗಂಡು ಸಂಕೋಚದಿಂದ ಕಾಡಿನೊಳಕ್ಕೆ ಓಡಿಹೋಗುತ್ತಾನೆ. ಅವನನ್ನು ಬಲವಂತದಿಂದ ಹಿಡಿದು ತಂದು ಇನ್ನೊಂದು ಎಡೆಯಲ್ಲಿ ಕೂರಿಸುತ್ತಾರೆ. ಹಿರಿಯನೊಬ್ಬ ಗಂಡಿಗೂ ಹೆಣ್ಣಿಗೂ ಒಳ್ಳೆಯ ದಂಪತಿಗಳ ನಡವಳಿಕೆಯನ್ನು ತಿಳಿಸುತ್ತಾನೆ. ಗಂಡಿನ ಕೈಗಳನ್ನು ಹಿಡಿದು ಕರೆತಂದು ಹೆಣ್ಣಿನ ತೊಡೆಯ ಮೇಲೆ ಕೂರಿಸುತ್ತಾನೆ. ಹಿರಿಯನು ಅವರ ತೋಳುಗಳನ್ನು ಪರಸ್ಪರ ಅವರ ಕುತ್ತಿಗೆಗೆ ಬಳಸಿಸುತ್ತಾನೆ. ಆಗ ಮದುವೆ ಮುಗಿಯುತ್ತದೆ. ಗಂಡು ಮತ್ತು ಹೆಣ್ಣು ಸಂಗಾತಿಗಳಾದ ಮೇಲೆ ಧನಿ ತೆಗೆದು ಜೋರಾಗಿ ಅಳಲಾರಂಭಿಸುತ್ತಾರೆ. ಬಂಧುಬಳಗ ಇಡೀ ರಾತ್ರಿ ಗುಡಿಸಲ ಮುಂದೆ ನರ್ತಿಸುತ್ತಾರೆ. ಮರುದಿನ ಗಂಡು ಹೆಣ್ಣಿಗೆ ಬಿಳಿ ಬಣ್ಣದ ಜೇಡಿ ಮಣ್ಣಿನಿಂದ ಬಳಿಯಲಾಗುತ್ತದೆ. ದಂಪತಿಗಳಿಗೆ ದುಡಿಮೆಯಿಂದ ಕೆಲವು ದಿನಗಳ ಕಾಲ ಮುಕ್ತಿ. ಕುಟುಂಬದವರೇ ಎಲ್ಲಾ ಅಗತ್ಯತೆಗಳನ್ನು ಪೂರೈಸುತ್ತಾರೆ. ಒಂದು ಮಗುವಾಗುವವರೆಗೂ ಯಾರೂ ಅವರನ್ನು ಗಂಡ ಹೆಂಡಿರೆಂದು ಕರೆಯುವುದಿಲ್ಲ.

ಸಾವಿಗೆ ಸಂಬಂಧಿಸಿದಂತೆ ಕರ್ಮಗಳು ಹೆಚ್ಚು ದೀರ್ಘವೂ, ಸಂಕೀರ್ಣವೂ ಆಗಿವೆ. “ಸಾವಿನ ಸುದ್ಧಿ ವೇಗವಾಗಿ ಹರಡುತ್ತದೆ. ಕೂಡಲೇ ಹೆಂಗಸರೆಲ್ಲಾ ಬಂದು ಶವದ ಸುತ್ತಲೂ ಕುಳಿತು ದಣಿವಾಗುವವರೆಗೂ ಅಳುತ್ತಾರೆ. ಅವರು ದಣಿದು ಎದ್ದರೆ ಗಂಡಸರು ಕುಳಿತು ಅಳುತ್ತಾರೆ. ಎಲ್ಲರೂ ಮೈಗೆ ಶೋಕ ಸೂಚಕ ಬಣ್ಣ ಬಳಿದುಕೊಳ್ಳುತ್ತಾರೆ. ಮೃತರಿಗೆ ಸಂಬಂಧವಿಲ್ಲದ ಹೆಣ್ಣೊಬ್ಬಳು ಶವದ ಕೇಶಮುಂಡನ ಮಾಡುತ್ತಾಳೆ. ಬಿಳಿ ಕೆಂಪು ಪಟ್ಟೆಗಳಿಂದ ಶವವನ್ನು ಸಿಂಗರಿಸುತ್ತಾಳೆ. ಕೈಕಾಲು ಮಡಿಸಿ ನಂಟರು ಶವದ ಮುಖದ ಮೇಲೆ ಗಾಳಿ ಊದುತ್ತಾರೆ. ಶವವನ್ನು ಚಾಪೆಯಲ್ಲಿ ಸುತ್ತಿ ಹಗ್ಗ ಬಿಗಿಯಲಾಗುತ್ತದೆ. ಒಬ್ಬಾತ ಶವವನ್ನು ಬೆನ್ನಮೇಲೆ ಹೊತ್ತುಕೊಳ್ಳುತ್ತಾನೆ. ಗಂಡಸರೆಲ್ಲಾ ಶವಯಾತ್ರೆಯಲ್ಲಿ ಭಾಗಿಯಾಗುತ್ತಾರೆ. ಆಳವಿಲ್ಲದ ಗುಣಿಯಲ್ಲಿ ತಲೆ ಪೂರ್ವಕ್ಕಿರುವಂತೆ ಶವವನ್ನು ಹೂಳುತ್ತಾರೆ. ಅಥವಾ ಮರದ ಮೇಲೆಯಿಟ್ಟು ಬರುತ್ತಾರೆ. ಶವಸಂಸ್ಕಾರ ಸ್ಥಳದಲ್ಲಿ ಬೆಂಕಿ ಹಾಕಿ ಬೊಂಬಿನ ಕೊಳವೆಯಲ್ಲಿ ನೀರನ್ನಿರಿಸಿ ಹಿಂದಿರುಗುತ್ತಾರೆ. ವಾಪಸ್ಸಾದ ನಂತರ ಬಿಡಾರದ ಪ್ರದೇಶದಲ್ಲಿ ಎಲೆಗಳನ್ನು ಎಸೆದಾಡಿ ಸಾವನ್ನು ಸೂಚಿಸುತ್ತಾರೆ. ಬಿಡಾರ ತ್ಯಜಿಸುತ್ತಾರೆ. ದುಃಖಾಚರಣೆಯ ಕೆಲವು ದಿನಗಳು ಕಳೆದ ಮೇಲೆ ಮತ್ತೆ ಅದೇ ಶಿಬಿರಕ್ಕೆ ಬರುತ್ತಾರೆ. ಎಳೆಯ ಕೂಸು ಸತ್ತರೆ ಒಲೆಯ ಮಗ್ಗುಲಲ್ಲಿ ಹೂಳುತ್ತಾರೆ. ಅದು ಮತ್ತೆ ಹುಟ್ಟಿ ಬರಲು ಸುಲಭವಾಗಲೆಂಬುದು ಇದರ ಉದ್ದೇಶ. ತಂದೆ ತಾಯಿಗಳು ಗುಡಿಸಲು ಬಿಡುವಂತಿಲ್ಲ. ಶೋಕಾಚರಣೆಯ ದಿನಗಳಲ್ಲಿ ನರ್ತನವಿಲ್ಲ. ಸತ್ತವನ ಹೆಸರನ್ನು ಹಿಡಿದು ಕೂಗುವಂತಿಲ್ಲ. ಶೋಕಾಚರಣೆ ಮುಗಿದ ನಂತರ ಅಸ್ತಿ ಸಂಚಯನ ಮತ್ತು ಅಳು. ಅಸ್ತಿಯನ್ನು ಸಾಗರದಲ್ಲಿ ತೊಳೆದು ಅದಕ್ಕೆ ಕೆಂಪು ಬಿಳಿ ಬಣ್ಣ ಬಳಿಯುತ್ತಾರೆ. ತಲೆಯೋಡನ್ನು ಹತ್ತಿರದ ಸಂಬಂಧಿ ಕುತ್ತಿಗೆಗೆ ನೇತು ಹಾಕಿಕೊಳ್ಳುತ್ತಾರೆ. ಸಂಜೆ ಮುಕ್ತಾಯದ ಸಂದರ್ಭ ಭಾರಿ ಭೋಜನ, ರಾತ್ರಿಯಿಡೀ ನರ್ತನವಿರುತ್ತದೆ. ದಾಸವಾಳದ ಒಂದು ಜಾತಿಯ ಗಿಡವಿದೆ. ಅದರ ಕಾಂಡದಿಂದ ನಾರು ತೆಗೆಯುತ್ತಾರೆ. ಹಗ್ಗ ಹೊಸೆಯುತ್ತಾರೆ. ಮೀನಿನ ಬೇಟೆಗೆ ಬಿಲ್ಲು ಕಟ್ಟಲು ಬಳಸುತ್ತಾರೆ. ಆಮೆ ಹಿಡಿಯಲು ಬಲೆ ನಿರ್ಮಿಸುತ್ತಾರೆ. ಈ ಗಿಡದ ಎಲೆಗಳು ಕಾಡಿನ ದುಷ್ಟ ಶಕ್ತಿಗಳನ್ನು ದೂರವಿಡುತ್ತವೆಂಬ ನಂಬಿಕೆಯಿದೆ. ಆಮೆಯ ಔತಣದ ಸಂದರ್ಭದಲ್ಲಿ ಅದರ ಕಟ್ಟಿಗೆಯಿಂದ ಆಮೆಯ ಮಾಂಸ ಬೇಯಿಸುತ್ತಾರೆ. ಬೂದಿಯನ್ನು ನೀರಿನಲ್ಲಿ ಕದಡಿ ಕುಡಿಯುತ್ತಾರೆ. ಕೆಮ್ಮು, ನೆಗಡಿಗಳಿಂದ ನರಳುವವರು ಈ ಬೂದಿಯನ್ನು ಎದೆಗೆ, ಕುತ್ತಿಗೆ, ಕಿವಿಗಳಿಗೆ ಬಳಿದುಕೊಳ್ಳುತ್ತಾರೆ. ಕಾಯಿಲೆ ಮನುಷ್ಯ ಈ ಬೂದಿಯನ್ನು ಮೂಗಿನ ಕೆಳಗೆ ಬಳಿದುಕೊಳ್ಳುತ್ತಾನೆ. ಅದರ ವಾಸನೆಗೆ ಕಾಯಿಲೆ ಗುಣವಾಗುವುದು. ‘ತಲಾರ್’ ಎಂಬ ಕೆಂಪು ಬಣ್ಣದ ಮೆದುಕಲ್ಲನ್ನು ತೇದು ನುಂಗುವುದು, ಅದರ ಸರಿಯನ್ನು ಬಳಿದುಕೊಳ್ಳುವುದೂ ಕೂಡ ಇನ್ನೊಂದು ಬಗೆಯ ಔಷಧಿ ಪ್ರಯೋಗ. ಬಿಳಿ ಜೇಡಿಮಣ್ಣನ್ನು ಹೊರಲೇಪನದ ಔಷಧಿಯಾಗಿ ಬಳಸುತ್ತಾರೆ. ಊತಗಳಿಗೆ ಇದನ್ನೇ ಪಟ್ಟು ಹಾಕುತ್ತಾರೆ. ಇದನ್ನು ಪೂಸಿಕೊಳ್ಳುವುದರಿಂದ ಸೊಳ್ಳೆ ಕಡಿತವೂ ನಿವಾರಣೆಯಾಗುತ್ತದೆ. ಹಿಪ್ಪೆವರ್ಣದ ಮಣ್ಣನ್ನು ಎಲ್ಲಾ ಕಾಯಿಲೆಗಳಿಗೂ ಸಿದ್ಧೌಷಧದಂತೆ ಬಳಸುತ್ತಾರೆ. ಕೆಲವು ಸಸ್ಯಗಳ ಸೇವನೆಯಿಂದ ಕಣ್ಣು ಕುರುಡಾಗುವುದೆಂದು ಭಾವಿಸಿದ್ದಾರೆ. ಭಿಕ್ಕಳಿಕೆಗೆ ಕಾರಣ ಕಾಣದೆ ಹೆಂಟೆಗೊದ್ದ ನುಂಗುತ್ತಾರೆ, ಬೇಧಿ ಉಂಟಾದಾಗ ಬೆಂಕಿಯಲ್ಲಿ ಕಾಸಿದ ಕಲ್ಲುಗಳ ಮೇಲೆ ರೋಗಿ ಮಲ ವಿಸರ್ಜಿಸುತ್ತಾನೆ. ಬೇಧಿ ನಿಲ್ಲುತ್ತದೆ. ನೋವು ಕಂಡು ಬರುವ ಶರೀರದ ಅಂಗಗಳನ್ನು ಗೀರಿ ಗಾಯಗೊಳಿಸುತ್ತಾರೆ. ನಾಗರಿಕ ಸಮಾಜದಲ್ಲಿ ಸಮಾಜವಾದದ ಬಗ್ಗೆ ಎಷ್ಟೆಲ್ಲಾ ಸಿದ್ಧಾಂತಗಳನ್ನು ನಾವು ತಿಳಿದಿದ್ದೇವೆ. ಇಲ್ಲಿನ ಮೂಲನಿವಾಸಿಗಳ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಶುದ್ಧ ಸಮಾಜವಾದದ ಮೂಲಾಂಶಗಳನ್ನು ಒಳಗೊಂಡಿದೆ. ಭೂಮಿಗೆ ಸಕಲರೂ ಒಡೆಯರು. ಆದರೆ ವ್ಯಕ್ತಿಗಳು ಕೆಲವು ಮರಗಳನ್ನು ಗುರುತಿಸಿ ಅವನ್ನು ತಮ್ಮವೆಂದು ಸಾರಬಹುದು. ಅವರು ಅವುಗಳ ಫಲಗಳಿಗೆ ಮಾತ್ರ ಒಡೆಯರು. ಒಡೆಯನ ಅನುಮತಿಯನ್ನು ಪಡೆದು ಇತತರು ಫಲಗಳನ್ನು ಕೀಳಬಹುದು. ಕಿತ್ತವನು ಒಡೆಯನಿಗೆ ಪಾಲುಕೊಡಬೇಕು. ಸಾಮೂಹಿಕ ಗುಡಿಸಲನ್ನು ಎಲ್ಲರೂ ಸೇರಿ ನಿರ್ಮಿಸುತ್ತಾರೆ. ದೋಣಿಗಳ ನಿರ್ಮಾಣವೂ ಎಲ್ಲರ ಶ್ರಮದಿಂದ ನಡೆಯುತ್ತದೆ. ಆದರೆ ದಿಮ್ಮಿಯನ್ನು ಆಯ್ಕೆ ಮಾಡಿ ಕೆತ್ತನೆಯ ಉಸ್ತುವಾರಿ ಮಾಡುವವನು ಒಡೆಯ. ಹೆಂಗಸು ಸಂಗ್ರಹಿಸುವುದಕ್ಕೆ ಅವಳೇ ಒಡೆಯಳು. ಹೀಗೆ ಉತ್ಪನ್ನಗಳ ಮೇಲೆ ಖಾಸಗಿ ಒಡೆತನವಿರುತ್ತದೆಯಾದರೂ ಸ್ವಾಭಾವಿಕ ಅಂಶಗಳ ಮೇಲೆ ಖಾಸಗಿ ಒಡೆತನವಿರುವುದಿಲ್ಲ. ಆಹಾರವುಳ್ಳವನು ಇಲ್ಲದಿರುವವನಿಗೆ ಕಡ್ಡಾಯವಾಗಿ ಕೊಡಲೇಬೇಕೆಂಬ ರೂಢಿಯಿದೆ. ಅವಿವಾಹಿತನು

ತನ್ನ ಬೇಟೆಯ ಅತ್ಯುತ್ತಮ ಭಾಗವನ್ನು ಹಿರಿಯರಿಗೆ ಕೊಡಬೇಕು. ಜನರು ಸಣ್ಣಪುಟ್ಟ ಸಂದರ್ಭಗಳಲ್ಲಿಯೂ ಪರಸ್ಪರರಿಗೆ ಉಡುಗೊರೆಗಳನ್ನು ಕೊಡುತ್ತಾರೆ. ಯಾರಾದರೂ ಇನ್ನೊಬ್ಬ ಕೇಳಿದ್ದನ್ನು ಕೊಡದಿರುವುದು ಅಸಭ್ಯತೆಯೆನಿಸುತ್ತದೆ.

ಹಿರಿಯ ಗಂಡಸರು, ಹೆಂಗಸರು ಸಮೂಹದ ವ್ಯವಹಾರಗಳನ್ನು ನಿಯಂತ್ರಿಸುತ್ತಾರೆ. ಕಿರಿಯರು ಹಿರಿಯರನ್ನು ಗೌರವಿಸುತ್ತಾರೆ. ಸಾಮಾಜಿಕ ಜೀವನದಲ್ಲಿ ವೈಯಕ್ತಿಕ ಪ್ರತಿಭೆ, ಸಾಮರ್ಥ್ಯಗಳು ಪ್ರಭಾವ ಬೀರುತ್ತವೆ. ಬೇಟೆಯಲ್ಲಿ, ಕಾದುವುದರಲ್ಲಿ, ಉದಾರತೆಯಲ್ಲಿ, ದಯೆಯಲ್ಲಿ ಹೆಸರು ಪಡೆದವನಿಗೆ, ಮುಂಗೋಪವಿಲ್ಲದವನಿಗೆ ಸಮಾಜದಲ್ಲಿ ಪ್ರತಿಷ್ಠೆ ಬೆಳೆಯುತ್ತದೆ. ಅಂಥವನ ಹೆಂಡತಿಯೂ ಸಮಾಜದಲ್ಲಿ ಪ್ರತಿಷ್ಠಿತಳೆನಿಸುತ್ತಾಳೆ. ಅತಿಮಾನುಷ ಶಕ್ತಿ ಪಡೆದ ಕೆಲವು ಗಂಡಸರೂ ಹೆಂಗಸರೂ ಪ್ರತಿಷ್ಠಿತರೆನಿಸುತ್ತಾರೆ.

ಇವರಲ್ಲಿ ಶಿಕ್ಷೆಗಳ ಬಗ್ಗೆ ನಿಗಧಿಯಾಗಿಲ್ಲ, ಆದರೆ ಅಪರಾಧಗಳು ಎರಡು ಬಗೆಯಲ್ಲಿ ಕಂಡು ಬರುತ್ತವೆ. ವೈಯಕ್ತಿಕ ಗಾಯಗೊಳಿಸುವುದು ಮತ್ತು ಕಳ್ಳತನ ಮಾಡುವುದು. ಇದಕ್ಕೆ ಹಾನಿಗೊಳಗಾದವನು ತನ್ನ ಸಂಗಡಿಗರ ನೆರವಿನಿಂದ ಸೇಡು, ಮುಯ್ಯಿ ತೀರಿಸಿಕೊಳ್ಳಬಹುದಾಗಿದೆ. ಸಾಮಾಜಿಕ ಸೋಮಾರಿತನ, ಅಗೌರವದ ಸೂಚನೆ, ಕೀಳು ನಡತೆ, ಮುಂಗೋಪ, ಜಗಳಗಂಟಿತನ ಮುಂತಾದವು. ಇವುಗಳಿಗೆ ಶಿಕ್ಷೆ ನಿಗಧಿಯಾಗಿಲ್ಲ. ಆದರೂ ಇಂಥಹ ಕೃತ್ಯ ತೋರಿದ ಅಪರಾಧಿಗೆ ಸಾಮಾಜಿಕ ಅಸಹಕಾರ ಕಂಡು ಬರುತ್ತದೆ.

ವನದ, ಸಾಗರದ, ರೋಗರುಜಿನಗಳ ಪೂರ್ವಿಕರ ಪ್ರೇತಗಳನ್ನು ಮತ್ತು ದುಷ್ಟಶಕ್ತಿಗಳನ್ನು ನಂಬುತ್ತಾರೆ. ಧಾರ್ಮಿಕ ಪೂಜಾ ವಿಧಿಗಳಿಲ್ಲ. 'ಪುಲುಗು' ಎಂಬ ಸಾಕಾರ ದೈವವು ಎಲ್ಲಾ ಘಟನೆಗಳಿಗೆ ಕಾರಣವೆಂದು ನಂಬುತ್ತಾರೆ. ಅವವನ್ನು ಆರಾಧಿಸುವುದಿಲ್ಲವಾದರೂ ಅವನ ಅಸಮಧಾನಕ್ಕೆ ಕಾರಣವಾಗುವಂಥಹದ್ದೇನನ್ನೂ ಮಾಡುವುದಿಲ್ಲ. ಅವನ ನಿವಾಸ ಆಕಾಶ. ಅವನಿಗೊಬ್ಬ ಹೆಂಡತಿ, ಒಬ್ಬ ಮಗ ಮತ್ತು ಅನೇಕ ಹೆಣ್ಣುಮಕ್ಕಳಿದ್ದಾರೆ. ಮಗನ ಮೂಲಕ ಮಗಳೊಂದಿಗೆ ಸೇರಿ ಆದೇಶ ಕೊಡುತ್ತಾನೆ. ಅವನಿಗೆ ದುಷ್ಟಶಕ್ತಿಗಳ ಮೇಲೆ ಹತೋಟಿಯಿಲ್ಲ. ಕಾಡಿಗೊಂದು ದುಷ್ಟಶಕ್ತಿ, ಕಡಲಿಗೊಂದು ದುಷ್ಟಶಕ್ತಿಯಿದೆ ಎಂದು ನಂಬುತ್ತಾರೆ. ಈ ಶಕ್ತಿಗಳಿಗೂ ಹೆಂಡಿರು ಮಕ್ಕಳುಂಟು. ರೋಗರುಜಿನಗಳಿಗೆ ಪುಡಿಶಕ್ತಿಗಳುಂಟು. ಸೂರ್ಯನು ಚಂದ್ರನ ಹೆಂಡತಿಯೆಂದು ಭಾವನೆ. ಮಯಬಗಾರ್ ಎಂದರೆ 'ಶ್ರೀ ಚಂದ್ರ,' 'ಕನಬೋರೆ' ಎಂದರೆ 'ಸೂರ್ಯ'" ಎಂದು ಹೇಳುತ್ತಾರೆ.

ಅಂಡಮಾನೀಯರು ವಿನಾಶದ ತೀರಾ ಅಂಚಿಗೆ ಬಂದು ತಲುಪಿದ್ದಾರೆ. ಈ ವಿನಾಶದ ಪ್ರಕ್ರಿಯೆಯು ನಾಗರಿಕತೆಗಳೊಂದಿಗೆ ಅವರ ಸಂಪರ್ಕ ಬೆಳೆದಂತೆಲ್ಲಾ ಬೆಳೆದು ಬಂದಿರುವುದು ಒಂದು ಘೋರ ದುರಂತ. ೧೭೮೦ರಲ್ಲಿ ಬ್ರಿಟಿಷರು ಮೊದಲು ಈ ದ್ವೀಪಗಳಲ್ಲಿ ನೆಲೆಯೂರಲು ಆರಂಭಿಸಿದರು. ಆಗ ಮೂಲ ನಿವಾಸಿಗಳ ಸಂಖ್ಯೆ ಸುಮಾರು ೮೦೦೦ ಇತ್ತು ಎಂದು ಅಂದಾಜಿಸಲಾಗಿತ್ತು. ೧೮೫೮ರ ವರೆಗೆ ಅವರ ಸಂಖ್ಯೆ ಬೆಳೆಯದಿದ್ದರೂ ಇಳಿಮುಖವಂತೂ ಆಗಲಿಲ್ಲ. ಮೊದಲು ಮಾನವನೊಂದಿಗೆ ಸ್ನೇಹ ತೋರಿದ ಜಾರವಾಗಳು ನವನಾಗರಿಕನ ಸಂಪರ್ಕದಿಂದ ತಮ್ಮ ಜನಾಂಗ ನಿರ್ನಾಮವಾಗಬಹುದು ಎಂಬ ಭಯವನ್ನು ತಾಳಿ ಕಾಡಿನ ಒಳಹೊಕ್ಕು ಸ್ನೇಹವಿರೋಧಿಗಳಾಗಿದ್ದು ಒಳಿತೆನಿಸುತ್ತಿದೆ. ಆದರೆ ಗ್ರೇಟ್ ಅಂಡಮಾನಿಯರು ಅಂಡಮಾನ್ ದ್ವೀಪಗಳಲ್ಲಿ ಸೇನಾ ನೆಲೆ ಅರಂಭವಾದಾಗಿನಿಂದಲೂ ಅವರ ಸಂಖ್ಯೆ ಕ್ಷೀಣಿಸುತ್ತಲೇ ಇದೆ. ಇಂದು ಅವರ ಸಂಖ್ಯೆ ೫೨ಕ್ಕೆ ಕುಸಿದಿದೆ. ಇವರಲ್ಲಿ ೨೬ ಗಂಡಸರು, ೧೮ ಹೆಂಗಸರು, ಮತ್ತು ೦೮ ಮಕ್ಕಳು. ಎರಡು ವರ್ಷಗಳ ಹಿಂದೆ ಇವರಿಗೆ ಮಕ್ಕಳಾದದ್ದನ್ನು ಸುದ್ಧಿ ಮಾಧ್ಯಮಗಳು ದೊಡ್ಡ ಸುದ್ಧಿಯನ್ನೇ ಮಾಡಿದ್ದವು. ಜಗತ್ತಿನಿಡೀ ಹುಡುಕಿದರೂ ಇಲ್ಲಿ ಮಾತ್ರ ಕಾಣ ಸಿಗುವ ಈ ವಿಶಿಷ್ಟ ಜನಾಂಗದ ಸಂತತಿ ಬೆಳೆಯುತ್ತಿರುವುದು ಮಾನವಶಾಸ್ತ್ರಜ್ಞರಿಗೆ ಸಂತಸದ ವಿಷಯವಾಗಿದೆ. ಗ್ರೇಟ್ ಅಂಡಮಾನಿಯರನ್ನು ಇಂದು ೧.೪ ಚದರ ಮೈಲಿ ವಿಸ್ತೀರ್ಣದ ಸ್ಟ್ರೈಟ್ ಐಲ್ಯಾಂಡಿನಲ್ಲಿ ಸಂರಕ್ಷಿಸುವ ಪ್ರಯತ್ನದಲ್ಲಿ ಸರ್ಕಾರ ಯಶಸ್ವಿಯಾಗಿದೆ. ಅವರಿಗೆ ಅಲ್ಲಿ ನೆಲೆ ನಿರ್ಮಿಸಿ ಕೊಟ್ಟಿದೆ. ೧೯೦೧ರಲ್ಲಿ ಇವರ ಸಂಖ್ಯೆ ೩೫೦೦ರಿಂದ ೫೦೦೦ ಇತ್ತೆಂದು ತಿಳಿದಾಗ ಇವರ ಸಂಖ್ಯಾಬಲ ತೀವ್ರತರವಾಗಿ ಕ್ಷೀಣಿಸುತ್ತಿರುವುದು ತಿಳಿದು ಬರುತ್ತದೆ.

ನಾಗರೀಕತೆಯ ಸಂಪರ್ಕದಿಂದಾಗಿ ಯಾವುದೇ ಬಗೆಯ ರೋಗ ನಿರೋಧಕ ಶಕ್ತಿಯನ್ನು ಹೊಂದಿರದ ಅಂಡಮಾನೀಯರು ಅನೇಕ ರೋಗಗಳಿಗೆ ತುತ್ತಾದರು. ಇಲ್ಲಿ ಬಂದ ರೋಗಗಳೆಲ್ಲವೂ ಆಮದಾದುದ ರೋಗಗಳಾಗಿದ್ದು, ಹೊತ್ತು ತಂದವರು ನಾಗರೀಕ ಮಾನವರೇ ಆಗಿದ್ದಾರೆ. ೧೮೬೮ರಲ್ಲಿ ನ್ಯೂಮೋನಿಯಾ, ೧೮೭೬ರಲ್ಲಿ ಸಿಫಿಲಿಸ್, ೧೮೭೭ರಲ್ಲಿ ದಡಾರ ಮತ್ತು ೧೮೯೨ರಲ್ಲಿ ಇನ್‌ಫ್ಲೂಯೆಂಜ಼ಾ ಎಂಬ ಸಾಂಕ್ರಾಮಿಕ ರೋಗಗಳು ಸಾವಿರಾರು ಜನರನ್ನು ಬಲಿ ತೆಗೆದುಕೊಂಡವು. ತಂಬಾಕಿನ ಅತಿಸೇವನೆ, ಅಫೀಮಿನ ಚಟ, ಅಷ್ಟೇ ಏಕೆ ಸರ್ಕಾರಗಳ ಒತ್ತಾಯದಿಂದ ಉಡುಪು ಧರಿಸುವುದು, ಆಹಾರದಲ್ಲಿ ಆದ ದಿಢೀರ್ ಬದಲಾವಣೆಗಳು ಕೂಡ ಇವರನ್ನು ರೋಗಿಗಳನ್ನಾಗಿಸಿದವು. ತಪ್ಪಿಸಿಕೊಂಡ ಕೈದಿಗಳನ್ನು ಹಿಡಿದು ಕೊಡಲು ಬ್ರಿಟಿಷರು ಅಂಡಮಾನಿಯರನ್ನು ಬಳಸಿದರು. ಇದಕ್ಕಾಗಿ ಅವರಿಗೆ ನೀಡುತ್ತಿದ್ದ ಆಮಿಷ – 'ಅಫೀಮು,' 'ಹೊಗೆಸೊಪ್ಪು' ಮತ್ತು 'ಮದ್ಯ'. ೨೧ನೇ ಶತಮಾನದಲ್ಲಿ ಇಂದೂ ಸಹ ತೀವ್ರ ಮದ್ಯ ಮತ್ತು ಅಫೀಮುಗಳ ವ್ಯಸನಿಗಳಾಗಿರುವವರು ಎಂದರೆ 'ಗ್ರೇಟ್ ಅಂಡಮಾನೀಯರು' ಮಾತ್ರ. ಸ್ವಾರ್ಥ ಮತ್ತು ಸುಖ ಸಾಧಿಸಲು ಗ್ರೇಟ್ ಅಂಡಮಾನೀಸ್ ಸ್ತ್ರೀಯರೊಂದಿಗೆ ಲೈಂಗಿಕ ಸಂಪರ್ಕ ಬೆಳಸಿದ ನವನಾಗರೀಕರು ಅವರ ದುರಂತಕ್ಕೆ ಕಾರಣರಾದರು.

ಓಂಗೇಗಳ ಸಂಖ್ಯೆ ಇಂದು ೧೦೧. ಸಾಮಾನ್ಯ ಮನುಷ್ಯ ತಲುಪಲು ಸುಲಭವಲ್ಲದ ಡ್ಯೂಗಾಂಗ್ ಕ್ರೀಕ್‌ನಲ್ಲಿ ಇವರನ್ನು ಬಯಲು ಬಂಧಿಗಳನ್ನಾಗಿಸಿ ಇಲ್ಲಿ ನೆಲೆ ನಿಲ್ಲುವಂತೆ ಮಾಡಲಾಗಿದೆ. ಇವರೂ ಸಹ ನಾಗರಿಕರ ಸಂಪರ್ಕವನ್ನು ವಿರೋಧಿಸಿದವರೇ ಅಗಿದ್ದಾರೆ. ಅದರೆ ೧೮೮೫ರಲ್ಲಿ ೨೫ ಓಂಗೇಗಳನ್ನು ಬ್ರಿಟಿಷರು ಸೆರೆ ಹಿಡಿದು ಚಿತ್ರಹಿಂಸೆ ನೀಡಿದ ನಂತರ ಅವರು ಮಣಿಯಲೇ ಬೇಕಾಯಿತು. ಇಂದು ಅಂಡಮಾನೀಯರಂತೆ ಓಂಗೇಗಳು ಅಪಾಯಕಾರಿಯಾದ ಸ್ಥಿತಿಯಲ್ಲಿದ್ದಾರೆ. ಮೃಗಾಲಯದ ಪ್ರಾಣಿಗಳಂತೆ ಶಕ್ತಿಹೀನರಾಗಿದ್ದಾರೆ. ತಮ್ಮ ಬೇಟೆಗಾರಿಕೆ ಮತ್ತು ಚತುರತೆಗಳನ್ನು ಮರೆತು ಸರ್ಕಾರ ಕೊಡುವ ರೇಷನ್‌ಗಾಗಿ ಕಾದು ಕೂತು ಸೋಮಾರಿಗಳಾಗಿದ್ದಾರೆ. ಅವರಿಗೆ ಸ್ವಲ್ಪವೂ ಇಷ್ಟವಿಲ್ಲದ ಕಾಂಕ್ರಿಟ್ ಗುಡಿಸಲಿನಲ್ಲಿ, ಮರದ ಗುಡಿಸಲುಗಳಲ್ಲಿ ಕಟ್ಟಿ ಹಾಕಿದ ಮಂಗಗಳಂತೆ ಜೀವಿಸುತ್ತಿದ್ದಾರೆ.

ಜಾರವಾಗಳ ಸಂಖ್ಯೆ ಇಂದು ೩೦೦ರಿಂದ ೩೮೦ ಅಂದರೆ ೧೯೦೧ರಲ್ಲಿ ಇದ್ದುದಕಿಂತ ಅರ್ಧಕ್ಕೆ ಕುಸಿದಿದೆ. ಅತ್ಯುತ್ತಮ ಮೈಕಟ್ಟುಳ್ಳ ಇವರು ಪ್ರಸ್ತುತ ನಾಗರಿಕತೆಯ ಸಂಪರ್ಕ ಸಾಧಕರ ಕ್ರೂರ ದೃಷ್ಟಿಗೆ ಗುರಿಯಾಗಿದ್ದಾರೆ. ಸುಮಾರು ೬೫ ಜನರ ಒಂದು ಪಂಗಡದೊಂದಿಗೆ ಈಗಾಗಲೇ ಸ್ನೇಹ ಸಂಪರ್ಕ ಬೆಳೆಸಲಾಗಿದೆ. ಇವರೂ ಸಹ ಅಂಡಮಾನೀಯರಂತೆ, ಓಂಗೇಗಳಂತೆ ನಿರ್ವೀರ್ಯವಾದ ವಿಷವೃತ್ತದ ಬದುಕಿಗೆ ತಮಗರಿವಿಲ್ಲದಂತೆಯೇ ಸಿಲುಕುತ್ತಿರುವುದನ್ನು ನೆನೆದರೆ ದುಃಖವಾಗುತ್ತದೆ.

ಸೆಂಟಿನೇಲಿಯನ್‌ರು ಜಗತ್ತಿನ ಏಕೈಕ ಹಳೆಯ ಶಿಲಾಯುಗದ ಮಾನವರು. ಇವರು ಇದುವರೆಗೂ ಇತರ ಮಾನವರ ಸಂಪರ್ಕಕ್ಕೆ ಬಂದಿಲ್ಲ. ಕಾಲ, ದೇಶ, ನಾಗರಿಕತೆಗಳು ಬದಲಾಗುತ್ತಿದ್ದರೂ ಇವರು

ಲಕ್ಷಾಂತರ ವರ್ಷಗಳಿಂದ ಬದಲಾವಣೆಯನ್ನೇ ಬಯಸದೇ ಕಾಲಕ್ಕೆ ಅತೀತರಾಗಿದ್ದಾರೆ. ದೂರದಿಂದ ಅವರನ್ನು ಕಂಡವರಿದ್ದಾರೆ, ಆದರೆ ಅವರನ್ನು ಭೇಟಿ ಮಾಡಲು ಅವರ ಹತ್ತಿರ ಹೋದವರು, ಸಂಪರ್ಕ ಸಾಧಿಸಲು ಪ್ರಯತ್ನಿಸಿದವರು ಮಾತ್ರ ಹಿಂದಕ್ಕೆ ಬಂದಿಲ್ಲ.

ಈ ಮೂಲ ನಿವಾಸಿಗಳ ಸಂಖ್ಯೆ ಕ್ಷೀಣಿಸಲು ಇತರ ಕೆಲವು ಕಾರಣಗಳು ಇವೆ. ಇವರು ತಮ್ಮತಮ್ಮ ಕರುಳು ಬಳ್ಳಿಯಲ್ಲಿಯೇ ಅನಿವಾರ್ಯವಾಗಿ ಮದುವೆಯಾಗುತ್ತಿರುವುದರಿಂದ ಇವರ ತಳಿಯು ಕ್ಷೀಣಿಸುತ್ತಿದೆ. ಮಕ್ಕಳಾಗುವ ವಯಸ್ಸಿನ ಜೋಡಿಗಳು ಕಷ್ಟಲಭ್ಯವಾದುದರಿಂದ ಹದಿಹರೆಯದ ಯುವಕರು ಮುದಿ ವಿಧವೆಯನ್ನು ಮದುವೆಯಾಗಬೇಕಾಗುತ್ತದೆ. ಅದೇ ರೀತಿ ಋತುಮತಿಯಾದ ಹೆಣ್ಣು ಮುದುಕನಿಗೆ ಮಡದಿಯಾಗಬೇಕಾಗುತ್ತದೆ. ಹೀಗಾಗಿ ಲೈಂಗಿಕ ಶಕ್ತಿಯ, ಸಂತಾನ ಶಕ್ತಿಯ ಕ್ಷೀಣತೆ, ಸಂತಾನ ಹೀನತೆ, ಪೀಚು ಸಂತಾನಗಳು ಕಂಡು ಬರುತ್ತಿವೆ. ಹುಟ್ಟಿದ ಮಕ್ಕಳು ಶೈಶವಾವಸ್ಥೆಯಲ್ಲಿಯೇ ಸಾಯುತ್ತಿರುವುದೂ ಕೂಡ ಸಂಖ್ಯಾಬಲ ಕ್ಷೀಣಿಸಲು ಮುಖ್ಯ ಕಾರಣಗಳಲ್ಲಿ ಒಂದಾಗಿದೆ.

ಇದಕ್ಕೇನು ಪರಿಹಾರ? ಎಂಬ ಈ ಪ್ರಶ್ನೆಗೆ ಉತ್ತರ ಹೇಳುವುದು ಬಹುಶಃ ಸಮಾಜಶಾಸ್ತ್ರಜ್ಞ ಮತ್ತು ಮಾನವಶಾಸ್ತ್ರಜ್ಞರಿಗೂ ಕಷ್ಟವಾಗಬಹುದು. ಒಂದು ವೇಳೆ ಅವರು ಉತ್ತರ ಸೂಚಿಸಿದರೂ ಜಾರಿಗೆ ಶ್ರಮಿಸಿದರೂ ಸರ್ಕಾರದ ಕಪಿ ಮುಷ್ಟಿಗೆ ಸಿಲುಕಿದ, ನಗರೀಕರಣದ ಅಸ್ತ್ರದ ಎದುರು ವ್ಯರ್ಥವಾಗುತ್ತಿದೆ. ಈಗಾಗಲೇ ನಾಶವಾಗಿ ಹೋಗಿರುವ ಅಂಡಮಾನಿನ ಹತ್ತು ಪಂಗಡಗಳು ತಮ್ಮ ಪ್ರವೃತ್ತಿ, ರೀತಿ ನೀತಿ, ರಿವಾಜು, ವೀರ್ಯ, ಸಂಪರ್ಕಗಳನ್ನು ಕಳೆದುಕೊಂಡು ಬಹುತೇಕ ಮಿಶ್ರತಳಿಗಳಾಗಿ ಮಾರ್ಪಾಡಾಗಿ ನಿಕೋಬಾರಿಗಳಾಗಿ ಬದುಕುತ್ತಿರುವ ಈ ಸಂದರ್ಭದಲ್ಲಿ ನೆನಸಿಕೊಂಡಾಗ ಪರಿಹಾರದ ಬಗ್ಗೆ ನಿರಾಸೆಯುಂಟಾಗುತ್ತದೆ.

ಮೂಲ ಜನಾಂಗದ ರಕ್ಷಣೆ, ಪೋಷಣೆ, ಅಭಿವೃದ್ಧಿಗಳಿಗೆ ಸರ್ಕಾರ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದರೆ ಆ ಪ್ರಯತ್ನದ ಮೂಲಭೂತ ಅಂಶಗಳನ್ನೇ ಮಾನವಶಾಸ್ತ್ರಜ್ಞರು ಇಂದು ಪ್ರಶ್ನಿಸುತ್ತಿದ್ದಾರೆ. ಪ್ರತಿ ಪಂಗಡದೊಂದಿಗೆ ಸಂಪರ್ಕ ಸಾಧಿಸಿ ಅವರಿಗೆ ನಾಗರಿಕ ಸೌಲಭ್ಯಗಳನ್ನು ಉಚಿತವಾಗಿ ಒದಗಿಸುವುದು ಸರ್ಕಾರದ ಧೋರಣೆ. ಮನೆ ಕಟ್ಟಿಕೊಡುವುದು, ಬಟ್ಟೆ ಒದಗಿಸುವುದು, ಶಾಲೆಗಳನ್ನು ತೆರೆಯುವುದು, ಮರಗೆಲಸ ಇತ್ಯಾದಿ ಕಲಿಸುವುದು, ಉಚಿತವಾಗಿ ಸಕ್ಕರೆ, ಟೀಪುಡಿ, ಅಕ್ಕಿ ಬೇಳೆ, ರೇಷನ್‌ಗಳನ್ನು ಕೊಡುವುದು ನಡೆಯುತ್ತಿದೆ. ಆದರೆ ಈ ಕಾರ್ಯಕ್ರಮಗಳ ಕುರಿತಾಗಿ ಮಾನವಶಾಸ್ತ್ರಜ್ಞರ ತೀವ್ರ ವಿರೋಧವಿದೆ. ಸಾವಿರಾರು ಚದರ ಮೈಲಿಯ ಕರಾವಳಿಯಿಂದ ಕರಾವಳಿಯವರೆಗೆ ಕಾಡುಗಳಲ್ಲಿ ಸ್ವಚ್ಛಂಧವಾಗಿ ಓಡಾಡುತ್ತಾ ವೀರ ಬದುಕನ್ನು ಸಾಗಿಸುತ್ತಿದ್ದವರನ್ನು ನೂರಾರು ದ್ವೀಪಗಳಲ್ಲಿನ ಒಂದು ಪುಟ್ಟ ಬಯಲು ಜೈಲಿನಂತಹ ದ್ವೀಪದಲ್ಲಿ ಕೂಡಿಹಾಕುವುದು ಅಮಾನವೀಯ ಮತ್ತು ಅವೈಜ್ಞಾನಿಕ. ಸರ್ಕಾರದ ಈ ಕ್ರಮದಿಂದ ಕಾಡು ಕಡಿದು ಅರಣ್ಯ ಸಂಪತ್ತನ್ನು ಲೂಟಿ ಹೊಡೆಯುವ ಕಂಟ್ರಾಕ್ಟರ್‌ಗಳಿಗೆ ಒಳಿತಾಗುವುದು ಬಿಟ್ಟರೆ ಬೇರೆ ಉಪಯೋಗ ಕಾಣುತ್ತಿಲ್ಲ.

ಮೂಲ ನಿವಾಸಿಗಳು ಕಾಡಿನವಾಸಿಗಳು; ನಾಗರಿಕರು ಕಾಡನ್ನು ನಾಶ ಮಾಡುತ್ತಾ ಹೋಗುತ್ತಿದ್ದಾರೆ. ಇವರ ನಡುವೆ ಸ್ನೇಹವೆಲ್ಲಿಂದ ಸಾಧ್ಯ? ಸ್ನೇಹದ ಹೆಸರಲ್ಲಿ ಬಂಧನ, ನಿಧಾನ ಮರಣದಂಡನೆಯ ಆಜೀವ ಕರಿನೀರಿನ ಶಿಕ್ಷೆ ಕಂಡು ಬರುತ್ತಿದೆ. ಶತಮಾನಗಳ ಕಾಲದ ಸ್ನೇಹ ಬೆಳೆಸುವ ಕಾರ್ಯಕ್ರಮಗಳು ವ್ಯತಿರಿಕ್ತ ಪ್ರತಿಫಲವನ್ನೇ ನೀಡುತ್ತಿರುವುದು ಚರಿತ್ರೆಯಿಂದ ತಿಳಿದು ಬರುತ್ತಿರುವ ಸಂಗತಿಯಾಗಿದೆ. ನಾಗರಿಕತೆಯಿಂದ ಅವರನ್ನು ಬದಲಾಯಿಸುವುದೆಂದರೆ ಅವರನ್ನು ಸೆರೆಹಿಡಿದು ಶಿಕ್ಷಿಸಿದಂತೆಯೇ. ಸರ್ಕಾರಗಳು ಲಕ್ಷಗಟ್ಟಲೇ ಹಣ ಖರ್ಚು ಮಾಡುತ್ತಿದ್ದರೂ ಸುಧಾರಣೆ ಮಾಡುತ್ತೇವೆಂಬ ಅಧಿಕಾರಶಾಹಿಯ ಅಭಿಪ್ರಾಯಗಳಿಗೆ ಮನ್ನಣೆಯಾಗಲಿ ಸುಧಾರಣೆಗೆ ಒಳಗಾಗಬೇಕಾಗಿರುವ ಜನರ ಮನದಾಳದ ವಿಚಾರಗಳನ್ನು ಅರಿಯದೇ ಈ ಬೃಹತ್ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಿದ್ದೇವೆ. ಪ್ರಾಣಿ ಸಂಗ್ರಹಾಲಯಗಳಲ್ಲಿ ಪ್ರತಿಯೊಂದು ಬಗೆಯ ಒಂದೋ ಎರಡೋ ಪ್ರಾಣಿಗಳನ್ನು ಸಂಗ್ರಹಿಸಿದರೆ ಇಲ್ಲಿ ಇಡೀ ಜನ ಸಮುದಾಯವನ್ನೇ ಸಂಗ್ರಹಿಸಿಡುವ ಹಠತೊಟ್ಟಂತೆ ಕಾಣುತ್ತಿದೆ. ಸರ್ಕಾರದ ಕಕ್ಷೆಗೆ, ರಕ್ಷಣೆಯ ವ್ಯಾಪ್ತಿಗೆ, ತೆರಿಗೆಯ ಉರುಳಿಗೆ ಒಳಪಡದ ಮಾನವರು ಈ ಭೂಮಿ ಮೇಲೆ ಇರಲು ಸಾಧ್ಯವಿಲ್ಲ. ಜೊತೆಗೆ ಹೀಗೆ ಒಳಪಟ್ಟಂತೆ ಕಾಣುವ ಅಧಿಕಾರಶಾಹಿಯನ್ನು ಬೆರಳತುದಿಗೆ ಮಣಿಸುವ ಕಾಡು ದರೋಡೆಕೋರರೊಂದಿಗೆ ಸರ್ಕಾರ ಶಾಮೀಲಾಗಿರುವುದು ಅತಿ ಹೇಯ ಮತ್ತು ದುರಂತದ ಸಂಗತಿಯಾಗಿದೆ.

'ಅಭಿವೃದ್ಧಿ' ಮತ್ತು 'ಕ್ಷೇಮಾಭಿವೃದ್ಧಿ' ಎಂಬ ಪದಗಳಿಗೆ ಬೇರೆಡೆಯಲ್ಲಿ ಸಲ್ಲುವ ಅರ್ಥವನ್ನೇ ಇಲ್ಲೂ ಸಹ ಕಲ್ಪಿಸಲಾಗಿದ್ದೂ, ಅನರ್ಥವನ್ನೇ ಸಾಧಿಸುತ್ತಿದ್ದೇವೆ. ಜರವಾ ಬುಡಕಟ್ಟುಗಳು ವಾಸಿಸುವ ಕಾಡಿನ ನಟ್ಟನಡುವೆ, ಅಂಡಮಾನ್ ದ್ವೀಪ ಸಮೂಹಗಳ ದಕ್ಷಿಣದಿಂದ ಉತ್ತರದುದ್ದಕ್ಕೂ ೩೦೦ ಕಿ.ಮೀ. ಉದ್ದದ ಟ್ರಂಕ್ ರಸ್ತೆ (ಹೆದ್ದಾರಿ)ಯನ್ನು ನಿರ್ಮಿಸುವ ಕೇಂದ್ರ ಸರ್ಕಾರದ ಯೋಜನೆಯನ್ನು ಮಾನವಶಾಸ್ತ್ರಜ್ಞರು ತೀವ್ರವಾಗಿ ವಿರೋಧಿಸಿದ್ದರು. ೮೭ ಕಿ.ಮೀ ಉದ್ದದ ರಸ್ತೆ ನಿರ್ಮಾಣದ ನಂತರ ನಿರ್ಮಾಣ ಕಾರ್ಯವನ್ನು ೧೯೭೭ರಲ್ಲಿ ಸ್ಥಗಿತಗೊಳಿಸಲಾಗಿತ್ತು. ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮಾನವಶಾಸ್ತ್ರಜ್ಞರ ಒತ್ತಾಯಕ್ಕೆ ಮಣಿದು ಕೆಲಸ ನಿಲ್ಲಿಸಿದ್ದರು. ಮತ್ತೇ ೧೯೮೩ರಲ್ಲಿ ಸಮಿತಿಯೊಂದನ್ನು ರಚಿಸಿ ಈ ಸಮಸ್ಯೆಯನ್ನು ಪುನರ್ ಪರಿಶೀಲಿಸಿ ರಸ್ತೆ ನಿರ್ಮಿಸಲು ಅನುಮತಿ ನೀಡಿಲಾಯಿತು. ಪ್ರಾಚೀನ ನಾಗರಿಕತೆಯೊಂದಕ್ಕೆ ಇತಿಶ್ರೀ ಹಾಡಲು ವಧಾ ಸ್ಥಾನವನ್ನು ನಿರ್ಮಾಣ ಮಾಡುವ ಕಾರ್ಯಕ್ಕೆ ಚಾಲನೆ ಒದಗಿಸಿದಂತಾಯಿತು. ಈಗ ಅಲೆಮಾರಿಗಳ ಬಗ್ಗೆ ಒಲವನ್ನು ಹೊಂದಿದ್ದ ಮಾನವಶಾಸ್ತ್ರಜ್ಞರೆಲ್ಲಾ ಸೋತು ಹತಾಶರಾಗಿದ್ದಾರೆ. ಜಾರವಾಗಳಿಗೆ ಅತ್ಯಂತ ದುರಂತಮಯ ಸನ್ನಿವೇಶ ನಿರ್ಮಾಣವಾಗಿದೆ. ಒಂದು ದಿಕ್ಕಿನಲ್ಲಿ ಮಾತ್ರ ಅವರಿಗೆ ಸಮುದ್ರವಿದೆ. ಇನ್ನೊಂದೆಡೆ ಸದಾ ಗುಂಡುಗಳನ್ನು ಉಗುಳುವ ಸದಾ ರೈಫಲ್ಲುಗಳ ಶಬ್ಧದ ಡಾಂಬರಿನ ಹೆಬ್ಬಾವು. ಕುಡಿಯುವ ನೀರಿಗೆ ಕೊರತೆ, ತಮ್ಮ ಪ್ರದೇಶದ ಹಂದಿ, ಜೇನುಗಳಿಗೆ, ತಾವು ತಿನ್ನದ ಜಿಂಕೆಗಳಿಗಾಗಿ ನಾಗರಿಕರ ಬರ್ಬರ ದಾಳಿ. ಅವರು ಈ ಸನ್ನಿವೇಶವನ್ನು ಎದುರಿಸಿ ನಾಗರಿಕರ ಜೀವಹಾನಿಯನ್ನು ಮಾಡಿದರೆ ಮುಂದಿನ ಪೀಳಿಗೆಯವರು ಅವರನ್ನು ಕ್ಷಮಿಸಬಹುದು. ಆದರೆ ನಾಗರಿಕರು ಒಬ್ಬ ಜಾರವಾನನ್ನು ಕೊಂದರೆ ನಾಗರಿಕರನ್ನು ಯಾರೂ ಕ್ಷಮಿಸುವುದಿಲ್ಲ.